# ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 158 ಟಿಎನ್‌ಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:03.05-2020

## ಆದೇಶ

1. ಕೇಂದ್ರ ಗೃಹ ಮಂತ್ರಾಲಯದ ದಿ. 01.05.2020 ರ ಆದೇಶ ಸಂಖ್ಯೆ 40-3 / 2020-ಡಿಎಂ-ಐ (ಎ)ರಲ್ಲಿ ಲಾಕ್‌ಡೌನ್ ಅವಧಿಯನ್ನು 04-05-2020 ರಿಂದ ಇನ್ನೂ ಎರಡು ವಾರಗಳವರೆಗೆ ವಿಸ್ತರಿಸಿದೆ ಮತ್ತು ಲಾಕ್‌ಡೌನ್ ಕ್ರಮಗಳ ಕುರಿತು ಹೊಸ ಮಾರ್ಗಸೂಚಿಗಳನ್ನು ಸಹ ಬಿಡುಗಡೆ ಮಾಡಿದೆ. ಇದು ದಿ. 04.05.2020 ರಿಂದ ಎರಡು ವಾರಗಳ ಅವಧಿಗೆ ಜಾರಿಗೆ ಬರಲಿದೆ. ಪರಿಣಾಮವಾಗಿ, ಕರ್ನಾಟಕ ಸರ್ಕಾರವು ಆದೇಶ ಸಂ.ಕಂಇ 158 ಟಿಎನ್‌ಆರ್ 2020, ದಿ.02.05.2020ರಂದು ಲಾಕ್ ಡೌನ್ ಕ್ರಮಗಳ ಕುರಿತು ಹೊಸ ಮಾರ್ಗಸೂಚಿಗಳನ್ನು ಎರಡು ವಾರಗಳ ಅವಧಿಗೆ ದಿ. 04.05.2020 ರಿಂದ ಜಾರಿಗೆ ಬರುವಂತೆ ವಿಸ್ತರಿಸಿ ಆದೇಶಿಸಿದೆ.

2. ಸರ್ಕಾರಿ ಆದೇಶ ಸಂಖ್ಯೆ ಕಂಇ 158 ಟಿಎನ್‌ಆರ್ 2020, ದಿನಾಂಕ 02-05-2020ವನ್ನು ಮುಂದುವರೆಸುತ್ತಾ, ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆರ ಆದೇಶ ಸಂ. D.O.No.Z.28015/19/ 2020-EMR, ದಿನಾಂಕ 30.04.2020ರನ್ವಯ ರಾಜ್ಯ ಕಾರ್ಯಕಾರಿ ಸಮಿತಿಯ ಅಧ್ಯಕ್ಷನಾದ ನಾನು, ನನಗೆ ಪ್ರತ್ಯಾಯೋಜಿಸಲಾಗಿರುವ ಅಧಿಕಾರವನ್ನು ಚಲಾಯಿಸಿ, ಜಿಲ್ಲೆಗಳನ್ನು ಕೆಂಪು, ಕಿತ್ತಳೆ ಮತ್ತು ಹಳದಿ ವಲಯಗಳನ್ನಾಗಿ ವರ್ಗೀಕರಿಸಿ ಮುಂದಿನ ಆದೇಶದವರೆಗೆ ಘೋಷಿಸಲಾಗಿದೆ.

| ಕ್ರ.ಸಂ. | ವಲಯಗಳ ಹೆಸರು | ಜಿಲ್ಲೆಗಳ ಹೆಸರು |
|---|---|---|
| 1 | ಕೆಂಪು ವಲಯ | ಬೆಂಗಳೂರು ನಗರ, ಮೈಸೂರು ಮತ್ತು ಬೆಂಗಳೂರು ಗ್ರಾಮಾಂತರ |
| 2 | ಕಿತ್ತಳೆ ವಲಯ | ಬೆಳಗಾವಿ, ವಿಜಯಪುರ, ಕಲಬುರಗಿ, ಬಾಗಲಕೋಟೆ, ಮಂಡ್ಯ, ಬಳ್ಳಾರಿ, ಧಾರವಾಡ, ದಕ್ಷಿಣ ಕನ್ನಡ, ಬೀದರ್, ಚಿಕ್ಕಬಳ್ಳಾಪುರ, ಗದಗ, ಉತ್ತರ ಕನ್ನಡ ಮತ್ತು ತುಮಕೂರು. |
| 3 | ಹಸಿರು ವಲಯ | ದಾವಣಗೆರೆ, ಉಡುಪಿ, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ಹಾಸನ, ಹಾವೇರಿ, ಕೊಡಗು, ಕೋಲಾರ, ಕೊಪ್ಪಳ, ರಾಯಚೂರು, ಶಿವಮೊಗ್ಗ, ರಾಮನಗರ ಮತ್ತು ಯಾದಗಿರಿ. |

ಟಿಎಂವಿಜಯಭಾಸ್ಕರ್

(ಟಿ.ಎಂ.ವಿಜಯ ಭಾಸ್ಕರ್)
ಮುಖ್ಯ ಕಾರ್ಯದರ್ಶಿ ಹಾಗೂ
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ
ಕಾರ್ಯಕಾರಿ ಸಮಿತಿ ಅಧ್ಯಕ್ಷರು